## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2148 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18.03.2022. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಳ್ತಂಗಡಿ ತಾಲ್ಲೂಕು ತೆಕ್ಕಾರು ಗ್ರಾಮದ ಗ್ರಾಮ ಪಂಚಾಯತ್‌ನಲ್ಲಿ ನೂತನ ಕಟ್ಟಡ ನಿರ್ಮಿಸಿದ್ದು, ಸದರಿ ಕಟ್ಟಡದಲ್ಲಿ ಓರ್ವ ಪಂಚಾಯತ್ ಸದಸ್ಯರು ತನ್ನ ನಿವೇಶನ ಎಂದು ಪಂಚಾಯತ್‌ನ ಸರ್ಕಾರಿ ಕಟ್ಟಡದಲ್ಲಿ ವ್ಯಾಸ್ತವ್ಯ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಈ ನಿವೇಶನವನ್ನು ಸರ್ಕಾರದಿಂದ ಪಂಚಾಯತ್‌ಗೆ ಮಂಜೂರಾದ ನಿವೇಶನವಾಗಿದ್ದು, ಸರ್ಕಾರದ ಹಣದಿಂದ ಪಂಚಾಯತ್ ಕಟ್ಟಡ ನಿರ್ಮಿಸಲಾಗಿರುವುದರಿಂದ ನಿವೇಶನದಲ್ಲಿ ಅಕ್ರಮವಾಗಿ ನೆಲೆಸಿರುವ ಸದಸ್ಯರನ್ನು ತೆರವುಗೊಳಿಸಲು ಸರ್ಕಾರವು ಕ್ರಮಕೈಗೊಂಡಿದೆಯೇ? | ಕಟ್ಟಡ ನಿರ್ಮಾಣ ಪ್ರಗತಿಯಲ್ಲಿರುವ ತೆಕ್ಕಾರು ಗ್ರಾಮ ಪಂಚಾಯತ್ ಕಟ್ಟಡದಲ್ಲಿ ಸದರಿ ಜಾಗವು ತನಗೆ ಮಂಜೂರಾಗಿರುವುದು ಎಂದು ತಿಳಿಸಿ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀಮತಿ ಯಮುನಾ ಮತ್ತು ಅವರ ಕುಟುಂಬದವರು ಅತಿಕ್ರಮಣ ಮಾಡಿಕೊಂಡಿರುವ ಕುರಿತು ತೆರವುಗೊಳಿಸುವ ಸಂಬಂಧವಾಗಿ ವಾಸ್ತವವಾಗಿ ಸರ್ವೆ ಮಾಡಿ ಸದರಿ ಜಾಗವು ಯಾರಿಗೆ ಸೇರಿದ್ದು ಎನ್ನುವ ಬಗ್ಗೆ ವರದಿಯನ್ನು ಮತ್ತು ನಕ್ಷೆಯನ್ನು ನೀಡಲು ಹಾಗೂ ಗಡಿ ಗುರುತು ಮಾಡಿಕೊಡಲು ಬೆಳ್ತಂಗಡಿ ತಹಶೀಲ್ದಾರರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬೆಳ್ತಂಗಡಿ ರವರು ಪತ್ರ ಬರೆದಿರುತ್ತಾರೆ. ಸರ್ವೆ ಕಾರ್ಯ ಮುಕ್ತಾಯಗೊಂಡ ಕೂಡಲೇ ಇತ್ಯರ್ಥಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

ಸಂ. ಗ್ರಾಅಪ 125 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.